**ಸಾಕ್ಷಿಯನ್ನು ದಿಃ 15.11.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

4 ನೇ ಪ್ರತಿವಾದಿಗೆ ಯಾವುದೇ ಹಕ್ಕು ಉಳಿದಿಲ್ಲ ಎಂದರೆ ನಿಜ. ಅವರು ಅಗತ್ಯ ಪಕ್ಷಗಾರರಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರವರು 1 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಿರುತ್ತಾರೆ. ಪ್ರತಿವಾದಿ 5 ಮತ್ತು 6 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಪ್ರತಿವಾದಿ 5 ರಿಂದ 8 ರವರಗೆ ಯಾವುದೇ ಹಕ್ಕು ಉಳಿದಿರುವುದಿಲ್ಲ. ದಿಃ 06.07.2009 ರಲ್ಲಿ ಮೊದಲು ದಾವಾ ವಾಪಸ್ ಪಡೆದಿರುತ್ತೇವೆ. ಈಗ ಸದರಿ ದಾವದ ಪೂರ್ತಿ ಆರ್ಡರ್ ಶೀಟ್ ನ ದೃಢೀಕೃತ ನಕಲನ್ನು ನಿಡಿ.5 ಎಂದು ಗುರುತಿಸಲಾಯಿತು. ಈ ದಾವಾ ದಿಃ 08.10.2009 ರಲ್ಲಿ ದಾಖಲಾಗಿದೆ. ಈ ಅವದಿಯಲ್ಲಿ ಪ್ರತಿವಾದಿ 9 ರಿಂದ 11 ರವರಿಗೆ ನೋಟೀಸ್ ಕೊಡಬಹುದಿತ್ತು ಅಂದರೆ ಅವರಿಂದ ಯಾವುದೇ ಪರಿಹಾರ ಬರುವುದಿಲ್ಲ ಎಂದು ಕೊಡಲಿಲ್ಲ. ನಾನು ಮಾರುಕಟ್ಟೆ ಬೆಲೆಯಾದ ನಲವತ್ತು ಲಕ್ಷಕ್ಕೆ ಶುಲ್ಕ ಕೊಡಬೇಕು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಡಿ. 4 ರ ಪ್ರಕಾರ ಖರೀದಿಸಿದ ಸ್ವತ್ತು ಕಾನೂನು ಬದ್ಧವಾಗಿದೆ ಎಂದರೆ ಸುಳ್ಳು. ದಾವಾ ಆಸ್ತಿಯ ರೆವಿನ್ಯೂ ಸ್ಕೆಚ್ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಆರ್.ಟಿ.ಸಿ. ಆಗಿರುತ್ತದೆ. ದಾವಾ ಆಸ್ತಿಯ ಇ.ಸಿ. ಪಡೆದುಕೊಂಡಿರುತ್ತೇನೆ. ಹಳೆಯ ದಾವದಲ್ಲಿ ಸಲ್ಲಿಸಿದ ಲಿಖಿತ ಹೇಳಿಕೆ ನೋಡಿರುತ್ತೇನೆ ಈಗ ಅದರ ದೃಢೀಕೃತ ಪ್ರತಿಯನ್ನು ನಿಡಿ. 6 ಎಂದು, ಆ ದಾವೆಯ ವಾದ ಪತ್ರ ನಿಡಿ 7 ಎಂದು, ಆ ದಾವೆಯಲ್ಲಿ ನಾನು ಸಾಕ್ಷಿ ಹೇಳಿದ್ದೇನೆ ಈಗ ಅದರ ದೃಢೀಕೃತ ನಕಲನ್ನು ನಿಡಿ. 8 ಎಂದು, ಇನ್ನಿಬ್ಬರು ಸಾಕ್ಷಿಗಳ ಹೇಳಿಕೆಯನ್ನು ನಿಡಿ. 9 ಮತ್ತು 10 ಎಂದು, ಆ ದಾವೆಯ ಪ್ರತಿವಾದಿ ಹೇಳಿಕೆಯನ್ನು ನಿಡಿ. 11 ಎಂದು, ಆ ದಾವೆಯಲ್ಲಿ ಸಲ್ಲಿಸಿದ ಎರಡು ತಿದ್ದುಪಡಿ ಅರ್ಜಿಗಳನ್ನು ನಿಡಿ. 12 ಮತ್ತು 13 ಎಂದು, ಅದಕ್ಕೆ ತಕರಾರು ಪ್ರತಿಯನ್ನು ನಿಡಿ. 14 ಎಂದು, ಆ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿರುವ ದಾಖಲೆಗಳನ್ನು

ನೋಡಿರುತ್ತೇನೆ. ದಿಃ 04.10.2015 ರ ಖರೀದಿ ಪತ್ರದ ದೃಢೀಕೃತ ನಕಲು ನಿಡಿ 15 ಎಂದು, ಮೂರು ಆರ್.ಟಿ.ಸಿಗಳ ನ್ನು ಒಟ್ಟಾಗಿ ನಿಡಿ. 16 ಎಂದು, ಸರ್ವೇ ನಂ. 197/1 ಬಿ ಬಗ್ಗೆ ಮೂರು ಆರ್.ಟಿ.ಸಿ. ಗಳನ್ನು ನಿಡಿ.17 ಎಂದು ಗುರುತಿಸಲಾಯಿತು.

ರೆವಿನ್ಯೂ ಇಲಾಖೆಯವರು ಸರ್ವೇ ನಂಬರ್ 197/2 ಎ ಮತ್ತು 197/2 ಬಿ ಎಂದು ಮಾಡಿರುತ್ತಾರೆ. ಆದರೆ ಅದರಲ್ಲಿ ಪೋಡ್ ಆಗಿಲ್ಲ. ನಕ್ಷೆಯಾಗಿ ಪೋಡ್ ಆಗಿದೆ ಎಂದರೆ ಸರಿಯಲ್ಲ. ರೆವಿನ್ಯೂ ಅಧಿಕಾರಿಗಳು ಪ್ರತಿವಾದಿ 9 ರಿಂದ 11 ಕಾನೂನುಬದ್ಧವಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ 1 ನೇ ಪ್ರತಿವಾದಿಯ ತಂದೆ ಶ್ರೀರಾಮ ಪುರದಲ್ಲಿ ಶಾನುಭೋಗ ಆಗಿರಲಿಲ್ಲ ಎಂದರೆ ಗೊತ್ತಿಲ್ಲ. ಆದರೆ ಎಲ್ಲಿ ಎಂದು ಗೊತ್ತಿಲ್ಲ. ನಾನು ಎರಡು ಕ್ರಯಪತ್ರಗಳನ್ನು ನೋಡಿರುತ್ತೇನೆ. ಅದರಲ್ಲಿ ಸ್ವತ್ತಿನ ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಬಂದಿ ನಮೂದು ಆಗಿರುತ್ತದೆ. 1 ನೇ ಪ್ರತಿವಾದಿ ಪೂರ್ಣ ಕ್ರಯದ ಪ್ರತಿಫಲ ನೀಡಿ ಖರೀದಿಸಿದ್ದಾರೆ ಎಂದರೆ ಸುಳ್ಳು . ಆದರೆ ಆ ಬಗ್ಗೆ ಒಕ್ಕಣೆ ಇದೆ. ಮಾರಾಟಗಾರರು ನನಗೆ ಈ ಬಗ್ಗೆ ಹೇಳಿಲ್ಲ ಆದರೆ ಅವರ ಕುಟುಂಬದವರಿಂದ ಗೊತ್ತಾಗಿದೆ. 1 ನೇ ಪ್ರತಿವಾದಿ ಒಂದು ಆಸ್ತಿಯನ್ನು ಉಳಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಕುಟುಂಬದವರಿಂದ ಯಾವುದೇ ಮೋಸ ಆಗಿಲ್ಲ ಆದ್ದರಿಂದ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಸತ್ಯಾಂಶ ಮರೆಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

**ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್ ನ್ಯಾಯಾಧೀಶರು (ಹಿ.ವಿ.), ಮೈಸೂರು**